ಚುಟುಕು ಸುದ್ದಿ

ಕನ್ನಡ ಶಾಲೆಗೆ ಅನುದಾನ ಒದಗಿಸದಿದ್ದರೆ ಹೋರಾಟ

ಬೀದರ್: ರಾಜ್ಯ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 1995 ರ ನಂತರ ಆರಂಭವಾದ ಕನ್ನಡ ಶಾಲೆಗಳಿಗೆ ಅನುದಾನ ಘೋಷಿಸದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು ಎಂದು ಕನ್ನಡ ಸಂರಕ್ಷಣಾ ಸಮಿತಿಯ ರಾಜ್ಯ ಸಂಚಾಲಕರೂ ಆದ ಕರ್ನಾಟಕ ರಾಜ್ಯ ಅನುದಾನ ರಹಿತ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಸಂಘದ ರಾಜ್ಯ ಅಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಎಚ್ಚರಿಸಿದ್ದಾರೆ.

ಈಗಾಗಲೇ ಕನ್ನಡ ಶಾಲೆಗಳ ಸ್ಥಿತಿಗತಿ ಬಗ್ಗೆ ರಾಜ್ಯದ ಕನ್ನಡ ಪರ ಸಂಘಟನೆಗಳು ಹಾಗೂ ಹೋರಾಟಗಾರರ ಗಮನ ಸೆಳೆಯಲಾಗಿದೆ. ಎಲ್ಲರಿಂದಲೂ ಸರ್ಕಾರದ ಮೇಲೆ ಒತ್ತಡ ಹೇರುವ ಭರವಸೆ ದೊರಕಿದೆ ಎಂದು ತಿಳಿಸಿದ್ದಾರೆ.

ಅನುದಾನಕ್ಕಾಗಿ ರಾಜ್ಯಮಟ್ಟದಲ್ಲಿ ಎರಡು ಬಾರಿ ಹೋರಾಟ ನಡೆಸಲಾಗಿದೆ. ಸಚಿವರು ಬೇಡಿಕೆ ಈಡೇರಿಸುವ ಭರವಸೆ ಕೂಡ ನೀಡಿದ್ದರು. ಆದರೆ, ಅನಂತರ ಈ ದಿಸೆಯಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಅನುದಾನಕ್ಕಾಗಿ ದಶಕದಿಂದ ಹೋರಾಟ ನಡೆಸುತ್ತಲೇ ಬರಲಾಗುತ್ತಿದೆ. ಆದರೆ, ಸರ್ಕಾರ ಈವರೆಗೆ ಸ್ಪಂದಿಸಿಲ್ಲ. ಹೀಗಾಗಿ ರಾಜ್ಯದಲ್ಲಿ ಸಾವಿರಾರು ಕನ್ನಡ ಶಾಲೆಗಳು ಮುಚ್ಚಿವೆ. ಸಾವಿರಾರು ಶಾಲೆಗಳು ಆಂಗ್ಲ ಮಾಧ್ಯಮ ಶಾಲೆಗಳಾಗಿ ಪರಿವರ್ತನೆ ಹೊಂದಿವೆ. ಕನ್ನಡ ಶಾಲೆಗಳ ಸ್ಥಿತಿ ಶೋಚನೀಯವಾಗಿದ್ದು, ಸರ್ಕಾರ ಅನುದಾನ ಘೋಷಿಸುವ ಮೂಲಕ ಅವುಗಳನ್ನು ರಕ್ಷಿಸಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಕನ್ನಡ ಶಾಲೆ ಉಳಿಸಲು ವಿಶೇಷ ಮುತುವರ್ಜಿ ವಹಿಸಬೇಕು. ಮುಖ್ಯಮಂತ್ರಿ ಹಾಗೂ ಸಚಿವರ ಮನವೊಲಿಸಿ ಖಾಸಗಿ ಕನ್ನಡ ಶಾಲೆಗಳಿಗೆ ಅನುದಾನ ಕೊಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಬಸವಕಲ್ಯಾಣಕ್ಕೆ ರಿಂಗ್ ರೋಡ್ ನಿರ್ಮಿಸಲು ಸಿಎಂಗೆ ಪ್ರಸ್ತಾವನೆ

ಉದಯಕಾಲ ನ್ಯೂಸ್

ಬಸವಕಲ್ಯಾಣ: ಬಸವಕಲ್ಯಾಣ ನಗರಕ್ಕೆ ನೂತನ ರಿಂಗ್ ರೋಡ್ ಸೌಲಭ್ಯ ಕಲ್ಪಿಸುವಂತ್ತೆ ಮುಖ್ಯಮಂತ್ರಿ ಸಿದ್ರಾಮಯ್ಯನವರಿಗೆ ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್ ಅವರು ಮನವಿ ಮಾಡಿದರು. ಮಂಗಳವಾರ ಬೆಂಗಳೂರಿನಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ರಾಮಯ್ಯನವರಿಗೆ ಭೇಟಿ ನೀಡಿದ ನಂತರ ಅವರು ಎ.ಪಿ.ಎಮ್.ಸಿ ಹೊಸ ಹೈ ಟೇಕ್ ಮಾರ್ಕೆಟ್ ಮತ್ತು ಮಲ್ಟಿ ವಿಲೇಜ್ ವಾಟರ್ ಸಪ್ಲೈ ಸ್ಕೀಮ್ ಸೇರಿದಂತೆ ತಾಲೂಕಿನಲ್ಲಿ ವಿವಿಧ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸುವ ಕುರಿತು ಪ್ರಸ್ತಾವನೆ ಸಲ್ಲಿಸಿ ಮನವಿ ಮಾಡಿದರು.

ಶ್ರೀ ವಿಶ್ವಾರಾಧ್ಯರ ವೈಭವದ ಜಾತ್ರೆಗೆ ಅಬ್ಬೆತುಮಕೂರು ಸಜ್ಜು

ಡಾ.ಗಂಗಾಧರ ಶ್ರೀ ಮಾಹಿತಿ | ಸಚಿವರಾದ ಎಚ್.ಕೆ. ಪಾಟೀಲ್-ರಾಮಲಿಂಗಾರೆಡ್ಡಿ ಅವರಿಂದ ಉದ್ಘಾಟನೆ

ಉದಯಕಾಲ ನ್ಯೂಸ್

ಯಾದಗಿರಿ: ಇಲ್ಲಿಗೆ ಸಮೀಪದ ಶ್ರೀಕ್ಷೇತ್ರ ಅಬ್ಬೆತುಮಕೂರಿನ ವಿಶ್ವಾರಾಧ್ಯರ ಜಾತ್ರಾ ನಿಮಿತ್ತದ ಭವ್ಯ ರಥೋತ್ಸವ ಫೆ. 22ರಂದು (ಭಾನುವಾರ) ಜರುಗಲಿದೆ ಎಂದು ಮಠದ ಪೀಠಾಧಿಪತಿ ಡಾ. ಗಂಗಾಧರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಮಂಗಳವಾರ ಮಠದ ಸಭಾಂಗಣದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರೆ ನಿಮಿತ್ಯ ಕಳೆದ ಫೆ. 11ರಿಂದ ಮಲ್ಲಿಕಾರ್ಜುನ ಶಾಸ್ತ್ರಿ ಐನಾಪುರ ಅವರಿಂದ ಆರಂಭಗೊಂಡಿರುವ ವಿಶ್ವಾರಾಧ್ಯರ ಪುರಾಣದ ಮಂಗಲೋತ್ಸವವು ಫೆ. 21 ರಂದು ಮಹಾಮಂಗಲಗೊಳ್ಳಲಿದೆ ಎಂದು ತಿಳಿಸಿದರು.

ಫೆ. 22 ರಂದು ಬೆಳಗ್ಗೆ ವಿಶ್ವಾರಾಧ್ಯರ ಗದ್ದುಗೆಗೆ ಹಾಗೂ ರಥೋತ್ಸವಕ್ಕೆ ವಿಶೇ?

ಮಹಾಪೂಜೆ ಜರುಗಲಿದೆ. ನಂತರ ಮಹಾರಾಷ್ಟ್ರ ಸರ್ಕಾರದ ಮಾಜಿ ರಾಜ್ಯ ಗೃಹ ಸಚಿವ ಸಿದ್ದರಾಮ ಮೇತ್ರೆ ಕುಟುಂಬದಿಂದ ರಥಾಂಗ ಹೋಮ ನಡೆಯಲಿದೆ. ಸಂಜೆ 6.15 ಕ್ಕೆ ಭವ್ಯರಥೋತ್ಸವ ಜರುವುದು, ರಾತ್ರಿ 8 ಕ್ಕೆ ಬನ್ನಿ ಬಸವ ಅನುಭವ ಮಂಟಪದ ಶರಣ ಸಕ್ರೇಪ್ಪಗೌಡ ಭವ್ಯ ವೇದಿಕೆಯಲ್ಲಿ ಕೊಪ್ಪಳದ ಗವಿ ಸಿದ್ದೇಶ್ವರ ಮಠದ ಒಡೆಯರಾದ ಜಗದ್ಗುರು ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳ ಪಾವನ ಸಾನಿಧ್ಯದಲ್ಲಿ ಮಾನವ ಧರ್ಮ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮವನ್ನು ಕಾನೂನು ಮತ್ತು ಸಂಸದಿಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ್ ಹಾಗೂ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಅವರು ಉದ್ಘಾಟಿಸಲಿದ್ದಾರೆ. ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ, ಡಾ. ಶರಣಪ್ರಕಾಶ ಪಾಟೀಲ್, ಈಶ್ವರ ಖಂಡ್ರೆ, ಎನ್.ಎಸ್ ಭೋಸರಾಜ್ ಅವರುಗಳು ಗ್ರಂಥ ಬಿಡುಗಡೆ ಮಾಡುವವರು. ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯಸಿಂಗ್, ಶಾಸಕರುಗಳಾದ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ, ರಾಜಾ ವೇಣುಗೋಪಾಲ ನಾಯಕ ಸೇರಿದಂತೆಯೇ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಕ್ಷೇತ್ರಗಳ ಹಾಲಿ, ಮಾಜಿ ಶಾಸಕರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶ್ರೀ ಮಠದ ಶಿವಶೇಖರ ಸ್ವಾಮಿಗಳು, ಯಾದಗಿರಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ವಿಶ್ವನಾಥರೆಡ್ಡಿ ಮಾಲಿ ಪಾಟೀಲ್, ವಕ್ತಾರ ಡಾ. ಸುಭಾ?ಚಂದ್ರ ಕೌಲಗಿ, ನರಸಣ್ಣಗೌಡ ರಾಯಚೂರ ಸೇರಿದಂತೆ ಇತರರಿದ್ದರು.

ಜೆಇಇ ಪರೀಕ್ಷೆ: ಎಸ್.ಆರ್.ಎನ್ ಮೆಹತಾ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಉದಯಕಾಲ ನ್ಯೂಸ್

ಕಲಬುರಗಿ: ಎಸ್. ಆರ್. ಎನ್ ಮೆಹತಾ ಪದವಿ ಪೂರ್ವ ವಿಜ್ಞಾನ ಕಾಲೇಜಿನ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳು ಜನವರಿಯಲ್ಲಿ ನಡೆದ ಜೆ.ಇ.ಇ ಮೇನ್ಸ್ ಪ್ರಥಮ ಹಂತದ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಅನೂಜ್ ದೇಶ್‌ಮುಖ್ (93.88) ಪ್ರತಿಶತ ಅಂಕದೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಜೆ.ಇ.ಇ ಮೇನ್ ಪರೀಕ್ಷೆ ಎರಡೂ ಹಂತಗಳಲ್ಲಿ ನಡೆಯುತ್ತಿದ್ದು ಈ ಎರಡೂ ಹಂತಗಳಲ್ಲಿಯ ಶೇಕಡವಾರು ಅಂಕ ಪರಿಶೀಲಿಸಿ ಹೆಚ್ಚಿನ ಶೇ ಅಂಕ ಪಡೆದವರಿಗೆ ಜೆ.ಇ.ಇ ಅಡ್ವಾನ್ಸಡ್ ಪರೀಕ್ಷೆ ಬರೆಯಲು ಪ್ರವೇಶ ನೀಡಲಾಗುತ್ತದೆ. ಹಾಗೂ ದೇಶದ ಪ್ರತಿಷ್ಠತ ಎನ್.ಐ.ಟಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗಿದ್ದಾರೆ. ವಿದ್ಯಾರ್ಥಿಗಳಾದ ಸಂಗಮೇಶ (91.11), ಯಶ್ ಗುಪ್ತಾ (86.25), ಭಾಗ್ಯಲಕ್ಷ್ಮೀ (71.89), ಪಾಯಲ್ (67.23) ಅಂಕಗಳನ್ನು ಪಡೆದುಕೊಂಡಿದ್ದಾರೆ. ಒಟ್ಟು 9 ವಿದ್ಯಾರ್ಥಿಗಳಲ್ಲಿ 5 ವಿದ್ಯಾರ್ಥಿಗಳು ಜೆ.ಇ.ಇ ಮೇನ್ಸ್ ಪರೀಕ್ಷೆ ತೇರ್ಗಡೆಯಾಗಿದ್ದಾರೆ.

ಎಸ್.ಆರ್.ಎನ್.ಮೆಹತಾ ಸಮೂಹ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಪ್ರೀತಮ್ ಮೆಹತಾ, ಮ್ಯಾನೆಜಿಂಗ್ ಟ್ರಸ್ಟಿಗಳಾದ ಚಕೋರ್ ಮೆಹತಾ ಹಾಗೂ ಪ್ರಾಚಾರ್ಯರಾದ ರಾಜಶೇಖರ ರೆಡ್ಡಿ ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಫೆ.23ರಂದು 121ನೇ ವಿಶ್ವ ರೋಟರಿ ದಿನಾಚರಣೆ

ಬೀದರ್: ರೋಟ್ರಿ ಇಂಟರ್ ನ್ಯಾಶ್ನಲ್ ಸಂಸ್ಥೆಯ 121ನೇ ವಿಶ್ವ ರೋಟರಿ ದಿನಾಚರಣೆಯನ್ನು ಅಂಗವಾಗಿ ರೋಟ್ರಿ ಕ್ಲಬ್ ಬೀದರ್ ವತಿಯಿಂದ ಫೆಬ್ರವರಿ 23ರಂದು ಸಂಜೆ 6.00 ಗಂಟೆಗೆ ನಗರದ ಲಾವಣ್ಯ ಕನ್ವೆನ್ಷನ್ ಹಾಲ್‌ನಲ್ಲಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಸಹಾಯಕ ಗವರ್ನರ್ ರೋ. ಇಂ. ಹಾವಶೆಟ್ಟಿ ಪಾಟೀಲ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರೋಟರಿ ಕಲ್ಯಾಣ ವಲಯದ ಮಾರ್ಗದರ್ಶನದಲ್ಲಿ ಹಾಲಿ ಅಧ್ಯಕ್ಷರಾದ ರೋ. ಬಸವಕುಮಾರ ವಾಟೆಲ್, ರೋ. ಅನೀಲಕುಮಾರ ಬಿರಾದಾರ, ಖಜಾಂಚಿ ರೋ. ಅನೀಲ ಮಸೂದಿ ಹಾಗೂ 2025-26ನೇ ಸಾಲಿನ ನಿರ್ದೇಶಕರ ಸಹಯೋಗದೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಇಂದು ನಗರದ ನೆಹರು ಒಳಾಂಗಣ ಕ್ರೀಡಾಂಗಣದಲ್ಲಿ ಶಟ್ಲರ್ ಕ್ಲಬ್ ಸಹಯೋಗದಲ್ಲಿ ಶಟಲ್ ಪಂದ್ಯಾವಳಿ ನಡೆಯಲಿದೆ. ಹಾಗೇ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಇಂದು ಬೆಳಗ್ಗೆ 10.00ಕ್ಕೆ ''ಬೀದರ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು'' ವಿಷಯದ ಮೇಲೆ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ (2 ಗಂಟೆ). ಬೆಳಿಗ್ಗೆ 10.15ಕ್ಕೆ ಎಲ್ಲಾ ವಯೋಮಾನದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ. ಬೆಳಿಗ್ಗೆ 10.30ಕ್ಕೆ ರಸ್ತೆ ಅಪಘಾತ ಸಂದರ್ಭಗಳಲ್ಲಿ ನೀಡುವ

ಪ್ರಥಮ ಚಿಕಿತ್ಸೆ ಹಾಗೂ ಸಿ.ಪಿ.ಆರ್ ಕುರಿತು ನುರಿತ ವೈದ್ಯರಿಂದ ಕಾರ್ಯಾಗಾರ. ಮಧ್ಯಾಹ್ನ 12.00ಕ್ಕೆ ''ದುಶ್ಚಟಗಳ ನಿರ್ಮೂಲನೆಯಲ್ಲಿ ಯುವಕರ ಪಾತ್ರ ಅಥವಾ ಜಿಲ್ಲಾಭಿವೃದ್ಧಿಯಲ್ಲಿ ರೋಟರಿ ಸಂಸ್ಥೆಯ ಪಾತ್ರ'' ವಿಷಯದ ಮೇಲೆ ಕಾಲೇಜು ವಿದ್ಯಾರ್ಥಿಗಳಿಗೆ ಭಾ?ಣ ಸ್ಪರ್ಧೆ (5 ನಿಮಿ?). ಸಂಜೆ 6.00ಕ್ಕೆ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳ ಸಮೂಹ ನೃತ್ಯಗಳ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ರೋಟರಿ ಕ್ಲಬ್ ಹಿರಿಯ ಸಲಹೆಗಾರರಾದ ಡಾ.ರಾಜಶೇಖರ ಸೇಡಂಕರ್ ಮಾತನಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿ?ತ್ ಅಧ್ಯಕ್ಷ ಸುರೇಶ ಚನ್ನಶೆಟ್ಟಿ, ರೊ.ರವೀಂದ್ರ ಮುಲಗೆ, ರೋಟರಿ ಕ್ಲಬ್ ನ ನಿಕಟಪೂರ್ವ ಅಧ್ಯಕ್ಷ ಸೋಮಶೇಖರ ಪಾಟೀಲ್, ಹಾಲಿ ಅಧ್ಯಕ್ಷ ಬಸವಕುಮಾರ ಪಾಟೀಲ್ ಕಾರ್ಯದರ್ಶಿ ಅನಿಲಕುಮಾರ ಬಿರಾದಾರ್ ಹಾಗೂ ಇತರರು ಮಾತನಾಡಿದರು. ನಿಕಟಪೂರ್ವ ಕಾರ್ಯದರ್ಶಿ ಕೃಪಾಶಿಂಧು ಪಾಟೀಲ ಮತ್ತಿತರರಿದ್ದರು.

ನಾಗರಕೆರೆ ಅಭಿವೃದ್ಧಿಗೆ 293.69 ಲಕ್ಷ ರೂ.ಗಳ ಮಂಜೂರು

ಶಹಾಪುರ: ನಗರದ ಚರಬಸವೇಶ್ವರ ಗದ್ದುಗೆಯ ಅವಣರದಲ್ಲಿ ಅವರಿಸಿಕೊಂಡ, ನಾಗರಕೆರೆ ಅಭಿವೃದ್ಧಿಗೆ ಕೇಂದ್ರ ಪುರಸ್ಕೃತ ಯೋಜನೆಯ ಅಮೃತ.2,0 ದಲ್ಲಿ ಕೆರೆ ಕಾಮಗಾರಿಗಳಿಗೆ 293,69 ಲಕ್ಷ ರೂ ಮಂಜೂರಿಯಾಗಿದೆ, ಎಂದು ಸಣ್ಣ ಕೈಗಾರಿಕಾ ಸಾರ್ವಜನಿಕ ಉದ್ಯಮಗಳ ಮಂತ್ರಿ ಶರಣಬಸ್ಸಪ್ಪಗೌಡ ದರ್ಶನಾಪುರವರು ಪತ್ರಿಕೆಗೆ ತಿಳಿಸಿದ್ದಾರೆ, ಬೇಸಿಗೆ ಸೇರಿದಂತೆ ವಿವಿಧ ಸಮಯಗಳಲ್ಲಿ ಶಹಾಪುರ ನಗರದಲ್ಲಿ ಅಂತರಜಲ ಹೆಚ್ಚಿಸಲು ನಾಗರಕೆರೆಯಲ್ಲಿ ನೀರು ಸಂಗ್ರದಿಂದ ಅನೂಕೂಲವಾಗುತ್ತದೆ, ನಗರದಲ್ಲಿ ಈಗಾಗಲೆ ವಿವಿಧ ಕಾಮಗಾರಿಗಳು ಕೈಗೊಳ್ಳಲಾಗಿದೆ, ನಾಗರಕೆರೆ ಅಭಿವೃದ್ಧಿಗೆ ಟೆಂಡರ್ ಬಾಕಿ ಇದ್ದು ಶಿಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ ಎಂದ ಅವರು ಸಾರ್ವತ್ರಿಕ ಮೂಲಭೂತ ಸೌಕರ್ಯಗಳಿಗೆ ಹೆಚ್ಚು ಆಧ್ಯತೆ ನೀಡಲಾಗುತ್ತದೆ ತಿಳಿಸಿದರು.

ನಾಳೆ ಶಿವಾಜಿ ಜಯಂತಿ: ಭವ್ಯ ಮೆರವಣಿಗೆ

ಶಹಾಬಾದ: ಹಿಂದೂ ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತ್ಯೋತ್ಸವ ವನ್ನು ಗುರುವಾರ ಫೆ. 19 ರಂದು ನಗರದಲ್ಲಿ ಜರುಗಲಿದೆ ಎಂದು ಮರಾಠ ಸಮಾಜದ ಅಧ್ಯಕ್ಷ ಸುನೀಲ ಭಗತ ರವರು ತಿಳಿಸಿದರು.

ಅವರು ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂದು ಸಾಯಂಕಾಲ 4 ಗಂಟೆಗೆ ಜಯಂತಿಯ ಅಂಗವಾಗಿ ಶಿವಾಜಿ ಮಹಾರಾಜರ ಪ್ರತಿಮೆಯ ಬೃಹತ್ ಭವ್ಯವಾದ ಮೆರವಣಿಗೆಯನ್ನು ಜಗದಂಬಾ ಮಂದಿರದಿಂದ ಪ್ರಾರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಭಾರತ ಚೌಕ್‌ದಲ್ಲಿ ಮುಕ್ತಾಯಗೊಳ್ಳುವದು.

ಮೆರವಣಿಗೆಯನ್ನು ಜನಪ್ರಿಯ ಶಾಸಕರಾದ ಬಸವರಾಜ ಮತ್ತಿಮಡು ಅವರು ಉದ್ಘಾಟಿಸುವರು, ನಗರ ಪೊಲೀಸ ಠಾಣೆಯ ಪಿಐ ಪರಶುರಾಮ ವನಂಜಕರ, ಉದ್ಯಮಿದಾರ ನರೇಂದ್ರ ವರ್ಮಾ, ದಿವ್ಯಾ ಹಾಗರಗಿ, ಮಣಿಕಂಠ ರಾಠೋಡ, ಉದಯ ಪವಾರ, ನಿಂಗಪ್ಪ ಹುಳಗೋಳ, ಸುನಿಲ ಫಂಡ ಉಪಸ್ಥಿತರಿರುವರು ಎಂದರು.

ಆದಕಾರಣ ನಗರದ ಸಮಸ್ತ ಎಲ್ಲಾ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜೇಂದ್ರ ಮಾನೆ, ಸುನಿಲ ಫಂಡ, ಡಾ.ಕಿಶನ ಜಾಧವ, ಅವಿನಾಶ ಸಾಳುಂಕೆ, ಭೀಮ ಬಗಾಡೆ, ಸುನಿಲ ದೇಶಮುಖ, ಪ್ರಭಾಕರ ಮಾನೆ, ರಮೇಶ ಪವಾರ, ನಾಗನಾಥ ಯಾದವ, ಪ್ರವೀಣ ಮಾನೆ ಉಪಸ್ಥಿತರಿದ್ದರು.

HINDUJA HOUSING FINANCE

ಹಿಂದೂಜಾ ಹೌಸಿಂಗ್ ಫೈನಾನ್ಸ್ ಅಮಿಟೆಡ್

CIN U65922TN2015PLC10093, www.hindujahousingfinace.com
ಕಾರ್ಪೊರೇಟ್ ಕಚೇರಿ: 167-169, 2ನೇ ಮಹಡಿ, ಅಣ್ಣಾ ಸಲೈ, ಸೈದಾಪೇಟ್, ಚೆನ್ನೈ - 600 015.
ಶಾಖಾ ಕಚೇರಿ: ಎಸ್‌ಎಲ್‌ವಿ ಪ್ಲಾಜಾ, 1ನೇ ಮಹಡಿ, ಇನ್‌ಫೊಟೆಕ್ ರಸ್ತೆ, ಎಸ್.ಪಿ. ವೃತ್ತದ ಹತ್ತಿರ, ಬಳ್ಳಾರಿ.

ಸ್ವಾಧೀನ ಪ್ರಕಟಣೆ (ಸ್ಥಿರಾಸ್ತಿಗಳಿಗೆ ಮಾತ್ರ) ಅಪೆಂಡಿಕ್ಸ್ - IV

ಕೆಳಗೆ ಸಹಿ ಮಾಡಿರುವವರು ಹಿಂದೂಜಾ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಹೆಚ್‌ಹೆಚ್‌ಎಫ್‌ಎಲ್) ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯುರಿಟಿ ಬಡ್ಡಿ ಜಾರಿ ಕಾಯ್ದೆ 2002 ರ ಅಡಿಯಲ್ಲಿ ಮತ್ತು ಸೆಕ್ಯುರಿಟಿ ಬಡ್ಡಿ (ಜಾರಿ) ನಿಯಮಗಳು 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕಂಪನಿಯ ಅಧಿಕೃತ ಅಧಿಕಾರಿಯು ಕೆಳಗೆ ಉಲ್ಲೇಖಿಸಲಾದ ಸಾಲಗಾರರು/ಖಾತರಿದಾರರು/ಖಾತರಿದಾರರುಗಳಿಗೆ ನೋಟಿಸ್‌ನಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಸದರಿ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿಸಲು ಬೇಡಿಕೆ ಸೂಚನೆ(ಗಳು) ಹೊರಡಿಸಿದ್ದಾರೆ.